**<u>ಒ.ಎಸ್.ನಂಬ್ರ:195/2013 ಪಿ.ಡಬ್ಲ್ಯೂ : 2</u>**

ದಿನಾಂಕಃ 16-07-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**<u>ಪಾಟಿ ಸವಾಲುಃ ಪ್ರತಿವಾದಿಯರ ಪರವಾಗಿ ಶ್ರೀ ಪಿ.ಎಸ್.ಆರ್ ವಕೀಲರಿಂದ</u>**

ನಾನು ಆರನೇ ತರಗತಿಯರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 1 ನೇ ವಾದಿ ನನಗೆ ಖಾಸಾ ಅಕ್ಕಳಾಗಬೇಕು. ಅವರ ಜಮೀನಿನಲ್ಲಿ ನಾನು ವಾಸ್ತವ್ಯ ಇರುತ್ತೇನೆ. ನಾನು ಗಾರೆ ಮತ್ತು ಕೃಷಿ ಕೆಲಸ ಮಾಡಿಕೊಂಡಿರುತ್ತೇನೆ. 1 ನೇ ವಾದಿಗೆ ದಾವಾ ಆಸ್ತಿಯಲ್ಲಿ ಹಕ್ಕು ಅಜ್ಜನಿಂದ ಬಂದಿರುತ್ತದೆ. ಸುಮಾರು 60 ವರ್ಷಗಳ ಹಿಂದಿನಿಂದಲೂ ದಾವಾ ಆಸ್ತಿಯಲ್ಲಿ ಮನೆ ಇರುತ್ತದೆ. ಮನೆ ಕಟ್ಟಿದ ಅಂಶ ಮೊದಲು ಬಾಗ್ಯಾತು (ತೋಟ) ಆಗಿತ್ತು. ದಾವಾ ಆಸ್ತಿಯ ಪೂರ್ವ, ಪಶ್ಚಿಮ ಮತ್ತು ಉತ್ತರದಲ್ಲಿ ಗದ್ದೆ ಇದ್ದು ದಕ್ಷಿಣ ದಿಕ್ಕಿನಲ್ಲಿ ಮನೆ ಇರುತ್ತದೆ. ದಾವಾ ಸ್ಥಳದ ಪೂರ್ವದಲ್ಲಿ 2 ನೇ ವಾದಿಯ ಸ್ಥಳ, ಅವರ ಪೂರ್ವದಲ್ಲಿ 3 ನೇ ವಾದಿಯ ಸ್ಥಳ, ಪಶ್ಚಿಮಕ್ಕೆ ಹೆಬ್ಬಾರರ ಸ್ಥಳ, ಉತ್ತರಕ್ಕೆ ಪ್ರತಿವಾದಿಯ ಸ್ಥಳದ ತೋಟವಾಗಿತ್ತು. ದಕ್ಷಿಣಕ್ಕೆ ಗಿರಿಜರವರ ಮನೆ ಅಡಿ ಸ್ಥಳ ಇರುತ್ತದೆ.

ಉತ್ತರಕ್ಕೆ ಪ್ರತಿವಾದಿಯರ ಸ್ಥಳ ಅದರಲ್ಲಿ ಸುಮಾರು 50 ವರ್ಷಗಳ ಹಿಂದಿನ ಮನೆ ಇರುತ್ತದೆ. ಪ್ರತಿವಾದಿಯು ಮನೆ ನಿರ್ಮಾಣ ಮಾಡಿದ ಸಮಯದಲ್ಲಿ ವಾದಿಯರ ಮನೆ ಇದ್ದಿತ್ತು ಎಂದು ತೋರಿಸುವ ದಾಖಲೆ ಇರುವುದಿಲ್ಲ. ಪ್ರತಿವಾದಿಯ ಮನೆಯ ಸುತ್ತ ಕಂಪೌಂಡ್ ಗೋಡೆ ಮೊದಲೂ ಇರಲಿಲ್ಲ ಈಗಲೂ ಇರುವುದಿಲ್ಲ. ಪಶ್ಚಿಮದ ಪಾಗಾರದಲ್ಲಿ ಒಂದು ಗೇಟು ಇತ್ತು ಎಂದರೆ ಸರಿಯಲ್ಲ. ಸದರಿ ಗೇಟಿನ ಮೂಲಕ ಪ್ರತಿವಾದಿಯು ತಮ್ಮ ಗದ್ದೆ ಮತ್ತು ಮನೇಗೆ ಬರುತ್ತಿದ್ದರು ಎಂದರೆ ಸರಿಯಲ್ಲ. ಪಶ್ಚಿಮದ ಗದ್ದೆಗೆ ಪೂರ್ವದಲ್ಲಿ ಒಂದು ನಡೆಅಂಚು ಇದೆ ಎಂದರೆ ಸರಿಯಲ್ಲ. ಈ ನಡೆಅಂಚು ಉತ್ತರದಿಂದ ದಕ್ಷಿಣಕ್ಕೆ ಇದೆ ಎಂದರೆ ಸರಿಯಲ್ಲ. ಈ ನಡೆಅಂಚಿನ ಮೂಲಕ ಉತ್ತರದ ಬೀದಿಯಲ್ಲಿರುವವರು ದಕ್ಷಿಣದ ಗದ್ದೆ ಮತ್ತು ವಾಸ್ತವ್ಯದಲ್ಲಿದ್ದ ಮನೆಗಳಿಗೆ ಸದರಿ ನಡೆಅಂಚನ್ನು ದಾರಿಯಾಗಿ ಉಪಯೋಗಿಸುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಸ್ಥಳಕ್ಕೆ ಕಮಿಷನರ್ ರವರು ಬಂದಿರುತ್ತಾರೆ ಆ ಸಮಯದಲ್ಲಿ ನಾನು ಹಾಜರಿರುತ್ತೇನೆ. ಕಮಿಷನರ್ ರವರು ವರದಿ ಮತ್ತು ನಕ್ಷೆಯನ್ನು ಸಲ್ಲಿಸಿರುತ್ತಾರೆಂದರೆ ಸರಿ . ಸದರಿ ವರದಿ ಮತ್ತು ನಕ್ಷೆಯು ಸರಿಯಾಗಿರುತ್ತದೆ. ಸದರಿ ನಕ್ಷೆಯಲ್ಲಿ ಪ್ರತಿವಾದಿಯವರ ಮನೆಗೆ ಇರುವ ಕಂಪೌಂಡ್ ಗೋಡೆಯನ್ನು ಕಾಣಿಸಲಾಗಿದೆ ಎಂದರೆ ಸರಿ . ವಿವಾದಕ್ಕೆ ಒಳಪಟ್ಟ ಮಣ್ಣಿನ ರಸ್ತೆಯನ್ನು ಸಹಾ ಕಾಣಿಸಲಾಗಿದೆ ಎಂದರೆ ಸರಿ . ನಮ್ಮ ಮನೆಯ ಅಕ್ಕಪಕ್ಕಕ್ಕೆ ಹೋಗಿ ಬರಲು ಕಾಲುದಾರಿಯನ್ನು ತೋರಿಸಲಾಗಿದೆ ಎಂದರೆ ಸ ರಿ . ಸಾಕ್ಷಿ ಮತ್ತೆ ಹೇಳುತ್ತಾರೆ ಅಲ್ಲಿ ಕಾಲು ದಾರಿ ಇಲ್ಲ. ಕಮಿಷನರ್ ರವರಿಗೆ ಪ್ರತಿವಾದಿಯರ ಸ್ಥಳದ ಮೇಲೆ ನಮ್ಮ ಮನೆಗೆ ಹೋಗುವ ರಸ್ತೆ ಇದೆ ಎನ್ನುವ ಬಗ್ಗೆ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ವರದಿಯಲ್ಲಿ ನಮ್ಮ ಮನೆಗೆ ಹೋಗುವ ರಸ್ತೆಯು ಪ್ರತಿವಾದಿಯರ ಸ್ಥಳದಲ್ಲಿ ಇದೆ ಎಂದು ಕಾಣಿಸದೇ ಇದ್ದಲ್ಲಿ ವರದಿಯು ತಪ್ಪಾಗಿರುತದೆ. ನಾವು ಸಾಧನೆ ಮಾಡುತ್ತಿರುವ ರಸ್ತೆಯು ಪ್ರತಿವಾದಿಯ ಸ್ಥಳದ ಮೇಲೆ ಇಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಕಲ್ಪಿಸಲಾಯಿತು**

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**